ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ
UNIVERSITY OF AGRICULTURAL AND HORTICULTURAL SCIENCES, SHIVAMOGGA

ಡಾ. ಪಿ. ನಾರಾಯಣಸ್ವಾಮಿ
ಕುಲಸಚಿವರು,
ದೂರವಾಣಿ: 08182-267011
ಇ-ಮೇಲ್: registrarshimoga@gmail.com

ಕುಲಸಚಿವರ ಕಛೇರಿ
ಕೃ.ತೋ.ವಿ.ವಿ, ಶಿವಮೊಗ್ಗ,
ಕರ್ನಾಟಕ-577204.
ಫ್ಯಾಕ್ಸ್:08182-298008/267011

ಸಂಖ್ಯೆ: ಕೃ.ತೋ.ವಿ.ವಿ(ಶಿ)/ಕು.ಸ/ಪ್ರಾಯೋಗಿಕ ಪರೀಕ್ಷೆ/ 492/2019-20    ದಿನಾಂಕ:17-05-2019

# ಪ್ರಕಟಣೆ

**ವಿಷಯ:** ದಿನಾಂಕ:18-05-2019ರಂದು ನಡೆಸುವ ಕೃಷಿ ಪ್ರಾಯೋಗಿಕ ಪರೀಕ್ಷೆಯ ಹೊರತಾಗಿ ಇತರೆ ವೃತ್ತಿಪರ ಕೋರ್ಸ್‌ಗಳು ನಡೆಸುವ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ದಿನಾಂಕ:19-05-2019ರಂದು ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುವ ಬಗ್ಗೆ.

**ಉಲ್ಲೇಖ:**
1 ಆಡಳಿತಾಧಿಕಾರಿಗಳು, ಕೆಇಎ ಇವರ ಪತ್ರ ಸಂಖ್ಯೆ:ಇಡಿ/ಕೆಇಎ/ಆ1/ಆಡಳಿತ/2019, ದಿನಾಂಕ:16-05-2019.
2. ಕುಲಪತಿಗಳು, ಕೃ.ವಿ.ವಿ., ಬೆಂಗಳೂರು, ಇವರ ಅನುಮೋದನೆ ದಿನಾಂಕ:16-05-2019.
3. ಕುಲಪತಿಗಳು, ಕೃ.ತೋ.ವಿ.ವಿ., ಶಿವಮೊಗ್ಗ, ಇವರ ಅನುಮೋದನೆ ದಿನಾಂಕ:17-05-2019.

******

ಮೇಲಿನ ವಿಷಯ ಹಾಗೂ ಉಲ್ಲೇಖ(1)ರ ತಮ್ಮ ಪತ್ರಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳೊಂದಿಗೆ ಸಮಾಲೋಚನೆ ನಡೆಸಿ ಈ ಕೆಳಕಂಡಂತೆ ತೀರ್ಮಾನಿಸಿದೆ.

1. ದಿನಾಂಕ:18-05-2019ರಂದು ಈ ಹಿಂದೆಯೇ ನಿಗದಿಯಾಗಿರುವ ಸಮಯಕ್ಕೆ ಬೆಂಗಳೂರಿನ ಜಿ.ಕೆ.ವಿ.ಕೆ., ಕೇಂದ್ರವೂ ಸೇರಿದಂತೆ, ರಾಜ್ಯದ ಎಲ್ಲಾ 15 ಕೇಂದ್ರಗಳಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುವುದು.
2. ಮಾನಸಗಂಗೋತ್ರಿಯ ವಾಕ್ ಮತ್ತು ಶ್ರವಣ ದೋಷ ಸಂಸ್ಥೆಯು BASLF ಕೋರ್ಸ್, ಆಯುಷ್ ಕೋರ್ಸ್‌ಗಳಿಗೆ ಸೇರಿದಂತೆ, ದ್ವಿತೀಯ ಪಿ.ಯು.ಸಿ., ನಂತರದ ಇತರೆ ವೃತ್ತಿಪರ ಕೋರ್ಸ್‌ಗಳಿಗೆ ದಿನಾಂಕ:18-05-2019ರಂದು ಪರೀಕ್ಷೆಗಳಿಗೆ ಹಾಜರಾಗಲಿರುವ ಅಭ್ಯರ್ಥಿಗಳಿಗೆ **ದಿನಾಂಕ:19-05-2019ರಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಿ.ಕೆ.ವಿ.ಕೆ., ಕೇಂದ್ರದಲ್ಲಿ ಮಾತ್ರ ಮಧ್ಯಾಹ್ನ 2.00 ಘಂಟೆಗೆ** ಕೃಷಿ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಅವಕಾಶ ಮಾಡಿಕೊಡಲಾವುದು.
3. ದಿನಾಂಕ:18-05-2019ರಂದು ಕೃಷಿ ಪ್ರಾಯೋಗಿಕ ಪರೀಕ್ಷೆಯ ಹೊರತಾಗಿ ಬೇರೆ ಪರೀಕ್ಷೆಗಳನ್ನು ಬರೆದಿರುವವರು ಕಡ್ಡಾಯವಾಗಿ ಅಂತಹ ದಾಖಲೆ ಅಥವಾ ಪುರಾವೆ ಒದಗಿಸಿದವರಿಗೆ ಮಾತ್ರ ಅನುಮತಿ ನೀಡಲಾಗುವುದು.
4. ಆದರೆ ದಿನಾಂಕ:19-05-2019ರಂದು ಕೃಷಿ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ದಿನಾಂಕ:13-05-2019ರಿಂದ ದಿನಾಂಕ:15-05-2019ರ ಒಳಗೆ ಕೃಷಿ ಸಂಬಂಧಿತ ದಾಖಲೆಗಳನ್ನು ಯಾವುದೇ ಕೇಂದ್ರದಲ್ಲಿ ಈಗಾಗಲೇ ಪರಿಶೀಲನೆ ಮಾಡಿಸಿಕೊಂಡು, ಕೃಷಿ ಪ್ರಾಯೋಗಿಕ ಪರೀಕ್ಷೆಗೆ ಅರ್ಹವಾಗಿರುವುದಕ್ಕೆ ಪ್ರಮಾಣೀಕೃತ ದಾಖಲೆ (verified & found correct seal with concerned officer signature on CET-Practical Test Hall ticket)ಅನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು. ಇಲ್ಲವಾದಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆಗೆ ಅಭ್ಯರ್ಥಿಗಳು ಅನರ್ಹರಾಗಿರುತ್ತಾರೆ.
5. **ದಿನಾಂಕ:19-05-2019ರಂದು ರಾಜ್ಯದ ಇತರೆ ಯಾವುದೇ ಕೃಷಿ ಪ್ರಾಯೋಗಿಕ ಕೇಂದ್ರಗಳಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುವುದಿಲ್ಲ ಮತ್ತು ಅಂದು ಯಾವುದೇ ಕೃಷಿ ಸಂಬಂಧಿತ ದಾಖಲಾತಿಗಳ ಪರಿಶೀಲನೆಯನ್ನು ನಡೆಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗುತ್ತಿದೆ.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಕುಲಸಚಿವರು
ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ-577 204
17/5/19

ಪ್ರತಿಯನ್ನು,
1. ಶಿಕ್ಷಣ ನಿರ್ದೇಶಕರು, ಕೃ.ತೋ.ವಿ.ವಿ. ಶಿವಮೊಗ್ಗ ಇವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಡೀನ್(ಕೃಷಿ), ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ ಇವರ ಮಾಹಿತಿಗಾಗಿ.
3. ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃ.ತೋ.ವಿ.ವಿ, ಶಿವಮೊಗ್ಗ ಇವರ ಮಾಹಿತಿಗಾಗಿ.
4. ಕಛೇರಿ ಕಡತಕ್ಕೆ.